**ಓ.ಎಸ್. ನಂ. 67/2020** **ಪಿ.ಡಬ್ಲ್ಯೂ- 2**

**<u>ಸಾಕ್ಷಿಯನ್ನು ದಿನಾಂಕ 5.1.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಿಪಿ2 ದಾಖಲೆಯನ್ನು ಪ್ರತಿವಾದಿಯರು ವಾದಿಗೆ ಬರೆದುಕೊಟ್ಟಿರುತ್ತಾರೆ. ಸಾಕ್ಷಿದಾರರು ಪ್ರತಿವಾದಿಯರ ನಿಪಿ2 ರ ಎಲ್ಲಾ ಪುಟದಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ2 ಎ ರಿಂದ ನಿಪಿ2 ಡಿ ಎಂದು ಗುರುತಿಸಲಾಯಿತು. ಸಾಕ್ಷಿದಾರರು ವಾದಿಯ ಎಲ್ಲಾ ಪುಟದಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ2 ಇ ಎಂದು ಗುರುತಿಸಲಾಯಿತು. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ2 ಎಫ್ ಎಂದು ಗುರುತಿಸಲಾಯಿತು. ನಿಪಿ2 ದಾಖಲೆಯನ್ನು 1 ನೇ ಪ್ರತಿವಾದಿಯು ತಯಾರಿಸಿಕೊಂಡು ಬಂದಿರುತ್ತಾರೆ.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಗೈರುಹಾಜರಿದ್ದು ಪಾಟೀ ಸವಾಲಿಗೆ ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.